ನೀನು ಸ್ನಾನ ಮಾಡಿಸು' ಅಂದೆ. ಮರುಮಾತಾಡದೆ ಪಾರಿಯ ಕೈ ಹಿಡಿದು ಬಚ್ಚಲ ಮನೆಯ ಕಡೆ ಹೋದಳು. ಅಬ್ಬಾ! ಈ ಪಾರೀನಾ ನಾನು ಮರೆತೇ ಬಿಟ್ಟಿದ್ದೆ, ಸುಮಾರು ವರ್ಷಗಳ ಹಿಂದೆ ಹಳ್ಳಿಯ ಮುರುಗೇಶಿ ಸಿಕ್ಕಿದ್ದ 'ನಮ್ಮ ಪಾರಿ ಎಲ್ಲೋ? ಊರಲ್ಲಿ ಇಲ್ವಾ?' ಅಂತಾ ಕೇಳಿದ್ದಕ್ಕೆ, 'ಗೊತ್ತಿಲ್ಲ ಕಣಕ್ಕಾ... ಇಲ್ಲಂತೂ ಇಲ್ಲ... ದುರ್ಗದ ಬಸ್ ಸ್ಟ್ಯಾಂಡ್, ರೈಲ್ವೆ ಸ್ಟೇಷನ್ ಹಿಂಗೆ ಅಲ್ಕಂಡು ಅದಳೆ ಅಂತಾರೆ... ಹುಚ್ಚಿಯಾಗಿ ಎಲ್ಲೋ ಓಡಿಹೋಗ್ಯಾಳೆ ಅಂತಾರೆ ಒಂದೀಸು ಜನ... ಪಕ್ಕಾ ಗೊತ್ತಿಲ್ಲ' ಅಂದಿದ್ದ, ಬಹಳ ಬೇಜಾರಾಗಿತ್ತು ಆಗ, ಇರಬಹುದೇನೋ. ಎಲ್ಲರೂ ಸೇರಿ ಆಕೆಗೆ ಮೋಸ ಮಾಡಿದ್ದಾರೆ ಅಂತ ಮಾತಾಡಿಕೊಳ್ತಾ ಇದ್ರು ನಮ್ಮವರೆಲ್ಲಾ. ಗುಸುಗುಸು ಮಾತು, ಅಸ್ಪಷ್ಟ ವಿಚಾರ, ವಿಚಿತ್ರ ನಡವಳಿಕೆ, ಕಾಲ ಚಕ್ರದ ಕೆಳಗೆ ಹೂತು ಹೋದ ಕಥೆ ನಮ್ಮ ಪಾರೀದು, ವ್ಯಥೆಯಾದಳು ಪಾರಿ, ಕಥೆಯಾದಳು ಪಾರಿ. ಬಚ್ಚಲ ಮನೆಯಲ್ಲಿ ದಬದಬ ನೀರು ಸುರಿಯೋ ಸದ್ದು ಮಧ್ಯೆ ನಮ್ಮ ಪಾರಿ ಚೀರಾಟ. ನಮ್ಮ ಜಯಮ್ಮನಿಗೆ ಏನು ಕೆಲಸ ಕೊಟ್ಟರೂ ಬಹಳ ಅಚ್ಚುಕಟ್ಟು. ಇನ್ನೂ ಒಂದು ಗಂಟೆಯಾದರೂ ಹೊರಕ್ಕೆ ಬರಲ್ಲ ಅನ್ನೋದು ಖಾತ್ರಿಯಾಯಿತು. ಹಳ್ಳಿಯ ಹಾಡಿನ ಜಾಡು ಹಿಡಿದು ಹೊರಟ ನನಗೆ ಅದೆಷ್ಟು ಉಲ್ಲಾಸ, ಉತ್ಸಾಹ, ಬೇಸಿಗೆ ರಜಾ ಬಂತೆಂದ್ರೆ ಹಕ್ಕಿ ಹಂಗೆ ಹಳ್ಳಿಗೆ ಹಾರುವ ಹುಮ್ಮಸ್ಸು, ಆಗ ಕಾರಿಲ್ಲದ

